# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರಸಮಾಧಾನ ಯೋಜನೆ, 2017 ಕುರಿತು.

** ** **

**ಓದಲಾಗಿದೆ:** 2017-18ರ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ.488.

**ಪ್ರಸ್ತಾವನೆ:**

ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಹಣಕಾಸು ಮಂತ್ರಿಗಳು 2017-18ನೇ ವರ್ಷದ ತಮ್ಮ ಆಯವ್ಯಯ ಭಾಷಣದಲ್ಲಿ, ಸರಕು ಮತ್ತು ಸೇವಾ ತೆರಿಗೆ ಜಾರಿಯಾಗುತ್ತಿರುವುದರಿಂದ ಬಾಕಿ ಇರುವ ತೆರಿಗೆ ಮತ್ತಿತರ ಬಾಕಿಯನ್ನು ಕಡಿಮೆಗೊಳಿಸುವ ಉದ್ದೇಶದಿಂದ ಕರಸಮಾಧಾನ ಯೋಜನೆಯೊಂದನ್ನು ಜಾರಿಗೆ ತರುವುದಾಗಿ ಘೋಷಿಸಿರುತ್ತಾರೆ. ಆದುದರಿಂದ, 1957ರ ಕರ್ನಾಟಕ ಮಾರಾಟ ತೆರಿಗೆ ಕಾಯಿದೆ; 1956ರ ಕೇಂದ್ರ ಮಾರಾಟ ತೆರಿಗೆ ಕಾಯಿದೆ; 1979ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಕಾಯಿದೆ; 1976ರ ಕರ್ನಾಟಕ ವೃತ್ತಿಗಳು, ವ್ಯವಹಾರಗಳು, ಅಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ ಕಾಯಿದೆ; 1979ರ ಕರ್ನಾಟಕ ವಿಲಾಸಗಳ ಮೇಲಣ ತೆರಿಗೆ ಕಾಯಿದೆ; 1957ರ ಕರ್ನಾಟಕ ಕೃಷಿ ವರಮಾನ ತೆರಿಗೆ ಕಾಯಿದೆ ಹಾಗೂ 1958ರ ಕರ್ನಾಟಕ ಮನರಂಜನೆಗಳ ಮೇಲಣ ತೆರಿಗೆ ಕಾಯಿದೆಗಳ ಅಡಿಯಲ್ಲಿ ಬಾಕಿಯಿರುವ ದಂಡ ಮತ್ತು ಬಡ್ಡಿಗಳನ್ನು ಮನ್ನಾ ಮಾಡಲು ಒಂದು ಯೋಜನೆಯನ್ನು ರೂಪಿಸಬೇಕಾದ ಅವಶ್ಯಕತೆಯಿರುತ್ತದೆ. ಅದರಂತೆ, ಸರ್ಕಾರವು ಕೆಳಕಂಡ ಆದೇಶವನ್ನು ಹೊರಡಿಸಿದೆ:

**ಆದೇಶ ಸಂ: ಆಇ 24 ಸಿಎಸ್‌ಎಲ್ 2017,**

**ಬೆಂಗಳೂರು, ದಿನಾಂಕ 31ನೇ ಮಾರ್ಚ್ 2017**

'ಕರಸಮಾಧಾನ ಯೋಜನೆ-2017' ಎಂಬ ಯೋಜನೆಗೆ ಸರ್ಕಾರ ಈ ಮೂಲಕ ಅಂಗೀಕಾರ ನೀಡಿದೆ. ಈ ಯೋಜನೆಯ ವಿವರಗಳು ಕೆಳಗೆ ಹೇಳಿದಂತಿವೆ:

ಅ) ಈ ಯೋಜನೆಯು 1957ರ ಕರ್ನಾಟಕ ಮಾರಾಟ ತೆರಿಗೆ ಕಾಯಿದೆ (ಇನ್ನು ಮುಂದೆ ಕಮಾತೆ ಕಾಯಿದೆ ಎಂದು ಉಲ್ಲೇಖಿಸಲಾಗುವುದು) ಮತ್ತು 1956ರ ಕೇಂದ್ರ ಮಾರಾಟ ತೆರಿಗೆ ಕಾಯಿದೆ (ಇನ್ನು ಮುಂದೆ ಕೇಂಮಾತೆ ಕಾಯಿದೆ ಎಂದು ಉಲ್ಲೇಖಿಸಲಾಗುವುದು) ಇವುಗಳ ಅಡಿಯಲ್ಲಿ ದಿನಾಂಕ 31/03/2005ರವರೆಗಿನ ಕರನಿರ್ಧರಣಾ ವರ್ಷಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯಾಪಾರಿ ಪಾವತಿಸಲು ಬಾಕಿಯಿರುವ ದಂಡ ಮತ್ತು ಬಡ್ಡಿಯ ಶೇಕಡ 90ರಷ್ಟನ್ನು ಮನ್ನಾ ಮಾಡುತ್ತದೆ.

ಆ) ಈ ಯೋಜನೆಯು 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯಿದೆ (ಇನ್ನು ಮುಂದೆ ಕಮೌತೆ ಕಾಯಿದೆ ಎಂದು ಉಲ್ಲೇಖಿಸಲಾಗುವುದು) ಮತ್ತು 1956ರ ಕೇಂದ್ರ ಮಾರಾಟ ತೆರಿಗೆ ಕಾಯಿದೆ (ಇನ್ನು ಮುಂದೆ ಕೇಂಮಾತೆ ಕಾಯಿದೆ ಎಂದು ಉಲ್ಲೇಖಿಸಲಾಗುವುದು) ಇವುಗಳ ಉಪಬಂಧಗಳ ಅಡಿಯಲ್ಲಿ 01/04/2005ರಿಂದ 31/03/2016ರ ವರ್ಷಗಳ ತೆರಿಗೆ ಅವಧಿಗಳಿಗೆ ಸಂಬಂಧಿಸಿದಂತೆ ಹೊರಡಿಸಿದ ಕರನಿರ್ಧರಣೆ / ಮರುಕರನಿರ್ಧರಣೆ ಆದೇಶಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯಾಪಾರಿ ಪಾವತಿಸಲು ಬಾಕಿಯಿರುವ ದಂಡ ಮತ್ತು ಬಡ್ಡಿಯ ಶೇಕಡ 90ರಷ್ಟನ್ನು ಮನ್ನಾ ಮಾಡುತ್ತದೆ.

ಇ) ಈ ಯೋಜನೆಯು 31/03/2016ರವರೆಗಿನ ಎಲ್ಲಾ ವರ್ಷಗಳಿಗೆ ಸಂಬಂಧಿಸಿದ ಕರನಿರ್ಧರಣೆ ಅಥವಾ ಮರುಕರನಿರ್ಧರಣೆಗೆ ಸಂಬಂಧಿಸಿದಂತೆ ಯಾವುದೇ ವ್ಯಾಪಾರಿ ಅಥವಾ ವ್ಯಕ್ತಿ ಅಥವಾ ಮಾಲೀಕನು ಪಾವತಿಸಲು ಬಾಕಿಯಿರುವ ದಂಡ ಮತ್ತು ಬಡ್ಡಿಯ ಶೇಕಡ 90ರಷ್ಟನ್ನು ಕೆಳಕಂಡ ಕಾಯಿದೆಗಳಡಿಯಲ್ಲಿ ಮನ್ನಾ ಮಾಡುತ್ತದೆ.-

i. 1979ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಕಾಯಿದೆ (ಇನ್ನು ಮುಂದೆ ಕಪ್ರತೆ ಕಾಯಿದೆ ಎಂದು ಉಲ್ಲೇಖಿಸಲಾಗುವುದು);